ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ.

ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ (ರಿ), ಸಿರಿಗೆರೆ, ಚಿತ್ರದುರ್ಗ ಜಿಲ್ಲೆ.

ಶ್ರೀ ಅಮೃತೇಶ್ವರ ಪ್ರೌಢಶಾಲೆ, ನೇರಲಕೆರೆ, ತರೀಕೆರೆ ತಾ,

ಚಿಕ್ಕಮಗಳೂರು ಜಿಲ್ಲೆ.

ವಿಷಯ : ಪ್ರಥಮ ಭಾಷೆ ಕನ್ನಡ

ಹತ್ತನೆಯ ತರಗತಿ

# ಪತ್ರ ಲೇಖನ ಕೈಪಿಡಿ

- ವೈಯಕ್ತಿಕ ಪತ್ರಗಳು [ ಖಾಸಗಿ ಪತ್ರಗಳು]
- ವ್ಯಾವಹಾರಿಕ ಪತ್ರಗಳು

ಪ್ರಯತ್ನ : ಗಿರಿಜಾಶಂಕರ್ ಜಿ ಎಸ್

ಕನ್ನಡ ಭಾಷಾ ಶಿಕ್ಷಕ

ಗಿರಿಜಾಶಂಕರ್ ಜಿ ಎಸ್, ಶ್ರೀ ಅಮೃತೇಶ್ವರ ಪ್ರೌಢಶಾಲೆ, ನೇರಲಕೆರೆ. Girijashankar.gs23@gmail.com

# <u>ವ್ಯಾವಹಾರಿಕ ಪತ್ರದ ಮಾದರಿ</u>

ದಿನಾಂಕ : ೨೦-೦೭-೨೦೧೭

ಇವರಿಂದ,

____________________

____________________

____________________

ಇವರಿಗೆ,

____________________

____________________

____________________

ಮಾನ್ಯರೆ,

ವಿಷಯ :- ________________________________________________________________--------

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ____________________

__________________________________________________________________________________-

--

__________________________________________________________________------------

__________________________________________________________________------------

__________________________________________________________________-----------

__________________________________________________________________------------

____________________

-ವಂದನೆಗಳೊಂದಿಗೆ,

ಸ್ಥಳ : ಇಂತಿ ತಮ್ಮ ವಿಶ್ವಾಸಿ

ದಿನಾಂಕ

ಗಿರಿಜಾಶಂಕರ್ ಜಿ ಎಸ್, ಶ್ರೀ ಅಮೃತೇಶ್ವರ ಪ್ರೌಢಶಾಲೆ, ನೇರಲಕೆರೆ. Girijashankar.gs23@gmail.com

೧ ನಿಮ್ಮನ್ನು ಶ್ರೀ ಅಮೃತೇಶ್ವರ ಪ್ರೌಢಶಾಲೆ, ನೇರಲಕೆರೆ, ತರೀಕೆರೆ ತಾಲ್ಲೂಕಿನ ಭುವನ್ ಕೆ ಎಮ್/ ಭೂಮಿಕಾ ಕೆ ಬಿ ಎಂದು ಭಾವಿಸಿಕೊಂಡು ಅನಾರೋಗ್ಯದ ಕಾರಣ ಕೇಳಿ ನಿಮ್ಮ ತರಗತಿ ಶಿಕ್ಷಕರಿಗೆ ಒಂದು ರಜಾ ಅರ್ಜಿಯನ್ನು ಬರೆಯಿರಿ.

ದಿನಾಂಕ : ೨೦-೦೭-೨೦೧೭

ಇವರಿಂದ,
ಭೂಮಿಕಾ ಕೆ ಬಿ
೧೦ನೆಯ ತರಗತಿ,
ಶ್ರೀ ಅಮೃತೇಶ್ವರ ಪ್ರೌಢಶಾಲೆ, ನೇರಲಕೆರೆ,
ತರೀಕೆರೆ ತಾ.

ಇವರಿಗೆ,
ತರಗತಿ ಶಿಕ್ಷಕರು,
ಶ್ರೀ ಅಮೃತೇಶ್ವರ ಪ್ರೌಢಶಾಲೆ,
ನೇರಲಕೆರೆ, ತರೀಕೆರೆ ತಾಲ್ಲೂಕು.

ಮಾನ್ಯರೆ,

ವಿಷಯ : ತೀವ್ರ ಅನಾರೋಗ್ಯದ ಕಾರಣ ರಜೆಯನ್ನು ಕೋರುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನನಗೆ ನಿನ್ನೆಯಿಂದ ತುಂಬಾ ಜ್ವರವಿರುವುದರಿಂದ ಶಾಲೆಗೆ ಬರಲು ಸಾಧ್ಯವಾಗುತ್ತಿಲ್ಲ. ಅಲ್ಲದೆ ವೈದ್ಯರು ಎರಡು ದಿನಗಳ ವಿಶ್ರಾಂತಿಯನ್ನು ಪಡೆಯಲು ಸೂಚಿಸಿದ್ದಾರೆ. ಹಾಗಾಗಿ ನಾಳೆ ಮತ್ತು ನಾಡಿದ್ದು ( ದಿ : ೨೧-೦೭-೨೦೧೭ ಮತ್ತು ೨೨-೦೭-೨೦೧೭) ರಜೆಯನ್ನು ಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

-ವಂದನೆಗಳೊಂದಿಗೆ,

ಸ್ಥಳ : ನೇರಲಕೆರೆ
ದಿನಾಂಕ : ೨೦-೦೭-೨೦೧೭

ಇಂತಿ ತಮ್ಮ ವಿಧೇಯ ವಿದ್ಯಾರ್ಥಿ
ಭೂಮಿಕಾ ಕೆ ಬಿ

೨ ನಿಮ್ಮನ್ನು ಶ್ರೀ ಗುರುಪಾದೇಶ್ವರ ಪ್ರೌಢಶಾಲೆ, ಸಾಣೇಹಳ್ಳಿ, ಹೊಸದುರ್ಗ ತಾಲ್ಲೂಕಿನ ಅರುಣ / ಅಮೂಲ್ಯ ಎಂದು ಭಾವಿಸಿಕೊಂಡು ಎಸ್‌ಎಸ್‌ಎಲ್‌ಸಿ ನಂತರದ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಯನ್ನು ಕೊಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರ ಬರೆಯಿರಿ.

ದಿನಾಂಕ : ೨೦-೦೭-೨೦೧೭

ಇವರಿಂದ,

ಅರುಣ ಎಮ್
ಶ್ರೀ ಗುರುಪಾದೇಶ್ವರ ಪ್ರೌಢಶಾಲೆ,
ಸಾಣೇಹಳ್ಳಿ, ಹೊಸದುರ್ಗ ತಾಲ್ಲೂಕು

ಇವರಿಗೆ,

ಮುಖ್ಯೋಪಾಧ್ಯಾಯರು,
ಶ್ರೀ ಗುರುಪಾದೇಶ್ವರ ಪ್ರೌಢಶಾಲೆ,
ಸಾಣೇಹಳ್ಳಿ, ಹೊಸದುರ್ಗ ತಾಲ್ಲೂಕು.

ಮಾನ್ಯರೆ,

ವಿಷಯ : ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಯನ್ನು ಕೊಡುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಾನು ಕಳೆದ ವರ್ಷ ಅಂದರೆ ೨೦೧೬-೧೭ರಲ್ಲಿ ತಮ್ಮ ಶಾಲೆಯಲ್ಲಿ ಎಸ್ ಎಸ್ ಎಲ್ ಸಿಯನ್ನು ವಿದ್ಯಾಭ್ಯಾಸ ಮಾಡಿ ಉತ್ತೀರ್ಣನಾಗಿರುತ್ತೇನೆ. ಹಾಗಾಗಿ ನನ್ನ ಮುಂದಿನ ವಿದ್ಯಾಭ್ಯಾಸಕ್ಕಾಗಿ ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರ ಬೇಕಾಗಿರುವುದರಿಂದ ಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

– ವಂದನೆಗಳೊಂದಿಗೆ,

ಸ್ಥಳ : ಸಾಣೇಹಳ್ಳಿ
ದಿನಾಂಕ : ೨೦-೦೭-೨೦೧೭

ಇಂತಿ ತಮ್ಮ ವಿಧೇಯ ವಿದ್ಯಾರ್ಥಿ
ಅರುಣ ಎಮ್

೩. ನಿಮ್ಮನ್ನು ಬೆಂಗಳೂರು ಜಿಲ್ಲೆಯ ಚುಂಚನಕುಪ್ಪೆ ಗ್ರಾಮದ ದೊಡ್ಡ ಆಲದಮರ ಪ್ರೌಢಶಾಲೆಯ ವಿದ್ಯಾರ್ಥಿ 'ಪ್ರತೀಕ್ಷಾ ಪಿ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ 'ವಿಶ್ವ ಪರಿಸರ ದಿನಾಚರಣೆ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ, ಬೆಂಗಳೂರಿನಲ್ಲಿರುವ ' ವಿಜಯವಾಣಿ ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.

<u>ದಿನಾಂಕ : ೦೫–೦೬–೨೦೧೭</u>

ಇವರಿಂದ,
ಪ್ರತೀಕ್ಷಾ ಪಿ,
೧೦ನೆಯ ತರಗತಿ,
ದೊಡ್ಡ ಆಲದಮರ ಪ್ರೌಢಶಾಲೆ, ಚುಂಚನಕುಪ್ಪೆ,
ಬೆಂಗಳೂರು ಜಿಲ್ಲೆ.

ಇವರಿಗೆ,
ಮಾನ್ಯ ಸಂಪಾದಕರು,
ವಿಜಯವಾಣಿ ದಿನಪತ್ರಿಕೆ,
ಬೆಂಗಳೂರು.

ಮಾನ್ಯರೆ,

<u>ವಿಷಯ : ವಿಶ್ವ ಪರಿಸರ ದಿನಾಚರಣೆಯ ವರದಿಯನ್ನು ಪ್ರಕಟಿಸುವ ಬಗ್ಗೆ.</u>

ನಮ್ಮ ಶಾಲೆಯಲ್ಲಿ ಜೂನ್ ೫ರಂದು ವಿಶ್ವ ಪರಿಸರ ದಿನಾಚರಣೆಯನ್ನು ತುಂಬಾ ಅರ್ಥಪೂರ್ಣವಾಗಿ ಆಚರಿಸಿದೆವು. ಮೊದಲು ಸುಮಾರು ೫೦೦ ವಿವಿಧ ಬಗೆಯ ಸಸಿಗಳನ್ನು ನೆಡುವುದರ ಮೂಲಕ ಸಂಭ್ರಮದಿಂದ ಆಚರಿಸಿದೆವು. ನಂತರ ನಡೆದ ಕಾರ್ಯಕ್ರಮದಲ್ಲಿ ನಮ್ಮ ಶಾಲೆಯ ವಿಜ್ಞಾನ ಶಿಕ್ಷಕರಾದ ಡಿ ಜಿ ಪ್ರಕಾಶ್ ಅವರು ಪರಿಸರದ ಜಾಗೃತಿಯ ಬಗ್ಗೆ ಅರಿವನ್ನು ಮೂಡಿಸಿದರು. ಅತಿಥಿಗಳಾಗಿ ಆಗಮಿಸಿದ್ದ ಪರಿಸರವಾದಿ ಕಡಿದಾಳ್ ಶ್ಯಾಮಣ್ಣನವರು ಮುಂದಿನ ಪೀಳಿಗೆಗೆ ಪರಿಸರ ಎಷ್ಟು ಅವಶ್ಯಕ ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ಈ ಕಾರ್ಯಕ್ರಮ ಎಲ್ಲರಿಗೂ ಮಾದರಿಯಾಗಬೇಕೆಂಬ ಆಶಯದಿಂದ ಈ ವರದಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

– ವಂದನೆಗಳೊಂದಿಗೆ,

ಸ್ಥಳ : ದೊಡ್ಡ ಆಲದಮರ | ಇಂತಿ ತಮ್ಮ ವಿಶ್ವಾಸಿ
ದಿನಾಂಕ : ೦೫–೦೬–೨೦೧೭ | ಪ್ರತೀಕ್ಷಾ ಪಿ

೪ ನೀವು ಮೈಸೂರಿನ ಕುವೆಂಪು ನಗರದ ಸ್ವಾಮಿ ವಿವೇಕಾನಂದ ಪ್ರೌಢಶಾಲೆಯ ೧೦ನೆಯ ತರಗತಿ ವಿದ್ಯಾರ್ಥಿ ತರುಣ್ ಸಾಗರ್ ಕೆ ಬಿ / ಬಿಂದುಶ್ರೀ ಕೆ ಎಮ್ ಎಂಬುದಾಗಿ ಭಾವಿಸಿ 'ಕನ್ನಡ ನಿಘಂಟು' ಇದರ ಪ್ರತಿಗಳನ್ನು ಕಳುಹಿಸಿಕೊಡುವಂತೆ ಕೋರಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್‌ಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ದಿನಾಂಕ : ೦೫-೦೬-೨೦೧೭

ಇವರಿಂದ,
ಬಿಂದುಶ್ರೀ ಕೆ ಎಮ್
10ನೆಯ ತರಗತಿ
ವಿವೇಕಾನಂದ ಪ್ರೌಢಶಾಲೆ,
ಕುವೆಂಪು ನಗರ, ಮೈಸೂರು.

ಇವರಿಗೆ,
ಮಾನ್ಯ ವ್ಯವಸ್ಥಾಪಕರು,
ಕನ್ನಡ ಸಾಹಿತ್ಯ ಪರಿಷತ್,
ಬೆಂಗಳೂರು.

ಮಾನ್ಯರೆ,

ವಿಷಯ : ಪರಿಷತ್ ಪ್ರಕಟಿಸಿರುವ ಕನ್ನಡ ನಿಘಂಟಿನ ಹತ್ತು ಪ್ರತಿಗಳನ್ನು ಕಳುಹಿಸಿಕೊಡುವ ಬಗ್ಗೆ.

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ತಾವು ಪ್ರಕಟಿಸಿರುವ ಕನ್ನಡ ನಿಘಂಟು ತುಂಬಾ ಚೆನ್ನಾಗಿದೆ ಎಂದು ನಮ್ಮ ಕನ್ನಡ ಶಿಕ್ಷಕರು ತಿಳಿಸಿದ್ದಾರೆ. ಹಾಗಾಗಿ ನನಗೆ ಮತ್ತು ನನ್ನ ಗೆಳೆಯರಿಗೆ ಹತ್ತು ಪ್ರತಿಗಳು ಬೇಕಾಗಿವೆ. ಆದ ಕಾರಣ ದಯಮಾಡಿ ಹತ್ತು ಪ್ರತಿಗಳನ್ನು ನನ್ನ ವಿಳಾಸಕ್ಕೆ ವಿ. ಪಿ. ಪಿ. ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ೫೦೦ ರೂಪಾಯಿಗಳ ಬ್ಯಾಂಕ್ ಹುಂಡಿಯನ್ನು ಮುಂಗಡವಾಗಿ ಈ ಪತ್ರದ ಜೊತೆಗೆ ಕಳಿಸಿರುತ್ತೇನೆ. ಆದಷ್ಟು ಬೇಗ ಈ ಪುಸ್ತಕಗಳನ್ನು ಕಳುಹಿಸಿಕೊಡಬೇಕಾಗಿ ವಿನಂತಿಕೊಳ್ಳುತ್ತೇನೆ.

– ವಂದನೆಗಳೊಂದಿಗೆ,

ಸ್ಥಳ : ಮೈಸೂರು.
ದಿನಾಂಕ : ೦೫-೦೬-೨೦೧೭

ಇಂತಿ ತಮ್ಮ ವಿಶ್ವಾಸಿ
ಬಿಂದುಶ್ರೀ ಕೆ ಎಮ್

೫ ನೀವು ಚಿತ್ರದುರ್ಗದ ಜಿಲ್ಲೆಯ ಹೊಳಲ್ಕೆರ ತಾಲ್ಲೂಕಿನ ತಾಳ್ಯ ಗ್ರಾಮದ ಶ್ರೀ ಆಂಜನೇಯಸ್ವಾಮಿ ಪ್ರೌಢಶಾಲೆಯ ವಿದ್ಯಾರ್ಥಿ ಗಿರೀಶ್ ಜಿ ಎಸ್ / ಗೌರಿ ಎಮ್ ಎಂಬುದಾಗಿ ಭಾವಿಸಿ ನಿಮ್ಮ ಶಾಲೆಗೆ ಸುಸಜ್ಜಿತ ಗ್ರಂಥಾಲಯ ಒದಗಿಸುವಂತೆ ಕೋರಿ ನಿಮ್ಮ ಶಾಸಕರಿಗೆ ಮನವಿ ಪತ್ರವೊಂದನ್ನು ಬರೆಯಿರಿ

ದಿನಾಂಕ : ೦೫-೦೬-೨೦೧೭

ಇವರಿಂದ,
ಗಿರೀಶ್ ಜಿ ಎಸ್
೧೦ನೆಯ ತರಗತಿ,
ಶ್ರೀ ಆಂಜನೇಯಸ್ವಾಮಿ ಪ್ರೌಢಶಾಲೆ,
ತಾಳ್ಯ, ಹೊಳಲ್ಕೆರೆ ತಾಲ್ಲೂಕು
ಚಿತ್ರದುರ್ಗ ಜಿಲ್ಲೆ.

ಇವರಿಗೆ,
ಮಾನ್ಯ ಶಾಸಕರು,
ಹೊಳಲ್ಕೆರೆ ಕ್ಷೇತ್ರ,
ಕರ್ನಾಟಕ ಸರ್ಕಾರ.

ಮಾನ್ಯರೆ,

ವಿಷಯ :- ನಮ್ಮ ಶಾಲೆಗೆ ಸುಸಜ್ಜಿತವಾದ ಗ್ರಂಥಾಲಯ ಒದಗಿಸಿಕೊಡುವ ಬಗ್ಗೆ

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಮ್ಮ ಶಾಲೆಯಲ್ಲಿ ಸರಿಯಾದ ಗ್ರಂಥಾಲಯದ ವ್ಯವಸ್ಥೆ ಇರುವುದಿಲ್ಲ. ನಮಗೆ ಬೇರೆ ಬೇರೆ ಪುಸ್ತಕಗಳನ್ನು ಓದು ಅಭಿರುಚಿ ಇದೆ. ಆದರೆ ಇಲ್ಲಿನ ಗ್ರಂಥಾಲಯದಲ್ಲಿ ಸಾಕಷ್ಟು ಉತ್ತಮ ಪುಸ್ತಕಗಳಿಲ್ಲ. ಇದರಿಂದ ವಿದ್ಯಾರ್ಥಿಗಳಾದ ನಮಗೆ ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ತುಂಬಾ ಕಷ್ಟಕರವಾಗಿದೆ. ಆದ್ದರಿಂದ ನಮ್ಮ ಶಾಲೆಗೆ ಸುಸಜ್ಜಿತವಾದ ಗ್ರಂಥಾಲಯವೊಂದನ್ನು ಒದಗಿಸಿಕೊಟ್ಟು ನಮ್ಮ ಜ್ಞಾನಾರ್ಜನೆ ಹೆಚ್ಚಿಸಲು ಸಹಕರಿಸಬೇಕೆಂದು ಕೋರುತ್ತೇನೆ.

-ವಂದನೆಗಳೊಂದಿಗೆ,

ಸ್ಥಳ : ತಾಳ್ಯ
ದಿನಾಂಕ: ೦೫-೦೬-೨೦೧೭

ಇಂತಿ ತಮ್ಮ ನಂಬುಗೆಯ
ಗಿರೀಶ್ ಜಿ ಎಸ್

೬ ನೀವು ದಾವಣಗೆರೆ ಜಿಲ್ಲೆಯ ಶ್ರೀ ಅನುಭವ ಮಂಟಪ ಪ್ರೌಢಶಾಲೆಯ ವಿದ್ಯಾರ್ಥಿನಿ ಹಂಸಶ್ರೀ ಕೆ ಎಮ್ / ದೃಶ್ಯಲಿಂಗ ಕೆ ಎನ್ ಎಂಬುದಾಗಿ ಭಾವಿಸಿ ಎಸ್ ಎಸ್ ಎಲ್ ಸಿ ನಂತರದ ನಿಮ್ಮ ವಿದ್ಯಾಭ್ಯಾಸದ ನಿಲುವನ್ನು (ಗುರಿಯನ್ನು) ಕುರಿತು ಕನ್ನಡ ಶಿಕ್ಷಕರಿಗೆ ಒಂದು ಪತ್ರವನ್ನು ಬರೆಯಿರಿ.

ದಿನಾಂಕ : ೦೫-೦೬-೨೦೧೭

ಇವರಿಂದ,
ದೃಶ್ಯಲಿಂಗ ಕೆ ಎನ್
೧೦ನೆಯ ತರಗತಿ,
ಶ್ರೀ ಅನುಭವ ಮಂಟಪ ಪ್ರೌಢಶಾಲೆ,
ದಾವಣಗೆರೆ.

ಇವರಿಗೆ,
ಶ್ರೀ ಗಿರಿಜಾಶಂಕರ್ ಜಿ ಎಸ್
ಕನ್ನಡ ಭಾಷಾ ಶಿಕ್ಷಕರು,
ಶ್ರೀ ಅನುಭವ ಮಂಟಪ ಪ್ರೌಢಶಾಲೆ,
ದಾವಣಗೆರೆ.

ಮಾನ್ಯರೆ,

ವಿಷಯ :- ಎಸ್ ಎಸ್ ಎಲ್ ಸಿ ನಂತರದ ನನ್ನ ವಿದ್ಯಾಭ್ಯಾಸದ ನಿಲುವನ್ನು (ಗುರಿಯನ್ನು) ಕುರಿತು.

ನನ್ನ ಪ್ರೀತಿಯ ಗುರುಗಳಿಗೆ ನಿಮ್ಮ ಶಿಷ್ಯ ದೃಶ್ಯಲಿಂಗ ಮಾಡುವ ನಮಸ್ಕಾರಗಳು. ಈ ವರ್ಷ ನಾನು ಎಸ್ ಎಸ್ ಎಲ್ ಸಿಯಲ್ಲಿ ಓದುತ್ತಿದ್ದೇನೆ. ನಿಮ್ಮ ಮಾರ್ಗದರ್ಶನದಂತೆ ಎಸ್ ಎಸ್ ಎಲ್ ಸಿಯಲ್ಲಿ ಹೆಚ್ಚು ಅಂಕ ಪಡೆಯಬೇಕೆಂಬ ಭರವಸೆಯನ್ನು ಇಟ್ಟುಕೊಂಡಿದ್ದೇನೆ. ನಿಮ್ಮ ಸಲಹೆಯಂತೆ ನಾನು ಮುಂದೆ ಪಿಯುಸಿ ಮತ್ತು ಪದವಿಯಲ್ಲಿ ಕಲಾ ವಿಭಾಗವನ್ನು ಆಯ್ಕೆ ಮಾಡಿಕೊಂಡು ಅದರಲ್ಲೇ ಸಾಧನೆ ಮಾಡಬೇಕೆಂದು ಇಚ್ಛಿಸಿದೇನೆ. ನಂತರ ಐ ಎ ಎಸ್ ಮಾಡಿ ನನ್ನಿಂದ ಜನಸಾಮಾನ್ಯರಿಗೆ ಅನುಕೂಲ ಮಾಡಬೇಕೆಂಬುದು ನನ್ನ ಜೀವನದ ಬಹಳ ದೊಡ್ಡ ಗುರಿ. ಈ ಗುರಿಯನ್ನು ಈಡೇರಿಸಲು ನೀವು ಸಂಪೂರ್ಣ ಮಾರ್ಗದರ್ಶನ ನೀಡಬೇಕೆಂದು ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

-ವಂದನೆಗಳೊಂದಿಗೆ,

ಸ್ಥಳ : ದಾವಣಗೆರೆ
ದಿನಾಂಕ: ೦೫-೦೬-೨೦೧೭

ಇಂತಿ ತಮ್ಮ ಪ್ರೀತಿಯ ವಿದ್ಯಾರ್ಥಿ
ದೃಶ್ಯಲಿಂಗ ಕೆ ಎನ್

೭ ನಿಮ್ಮ ಊರಿನಲ್ಲಿರುವ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆಯಿರಿ.

ದಿನಾಂಕ : ೨೦/೦೭/೨೦೧೭

ಇವರಿಂದ,

ಅಭಿಷೇಕ್ ಎಮ್

ತಾಳ್ಯ,

ಹೊಳಲ್ಕೆರೆ ತಾಲ್ಲೂಕು,

ಚಿತ್ರದುರ್ಗ ಜಿಲ್ಲೆ.

ಇವರಿಗೆ,

ಮಾನ್ಯ ಅಧ್ಯಕ್ಷರು,

ಗ್ರಾಮ ಪಂಚಾಯಿತಿ

ತಾಳ್ಯ,

ಹೊಳಲ್ಕೆರೆ ತಾಲ್ಲೂಕು.

ಮಾನ್ಯರೆ,

ವಿಷಯ :- ಬೀದಿ ದೀಪಗಳನ್ನು ಸರಿಪಡಿಸುವ ಬಗ್ಗೆ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಊರಿನಲ್ಲಿ ಅನೇಕ ಬೀದಿಗಳಲ್ಲಿ ಬೀದಿ ದೀಪಗಳು ಹಾಳಾಗಿ ಹೋಗಿವೆ. ಹೀಗಾಗಿ ಅನೇಕ ಸಮಸ್ಯೆಗಳು ಎದುರಾಗುತ್ತಿವೆ. ಕಳೆದ ಒಂದು ವಾರದಿಂದ ಮುದುಕರು, ಮಹಿಳೆಯರು, ಮಕ್ಕಳು ಹಲವಾರು ತೊಂದರೆಗಳಿಗೆ ಒಳಗಾಗಿದ್ದಾರೆ. ಮುಂದೆ ದೊಡ್ಡ ಅನಾಹುತಗಳು ನಡೆಯುವ ಮುನ್ನ ಈ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಊರಿನ ನಾಗರಿಕರ ಪರವಾಗಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ಸ್ಥಳ : ತಾಳ್ಯ
ದಿನಾಂಕ: ೨೦/೦೭/೨೦೧೭

ಇಂತಿ ತಮ್ಮ ನಂಬುಗೆಯ
ಅಭಿಷೇಕ್ ಎಮ್

# <u>ವೈಯಕ್ತಿಕ ಪತ್ರಗಳು ( ಖಾಸಗಿ ಪತ್ರಗಳು)</u>

೧ ನೀವು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಹುಣಸಘಟ್ಟ ಗ್ರಾಮದ ಶ್ರೀ ಸುಜಾತ ಪ್ರೌಢಶಾಲೆಯ ವಿದ್ಯಾರ್ಥಿ ತರುಣ್ ಸಾಗರ್ ಕೆ ಬಿ / ಡಿಂಪಲ್ ಕೆ ಆರ್ ಎಂಬುದಾಗಿ ಭಾವಿಸಿ ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ನಿಮ್ಮ ತಾಯಿಯವರಿಗೆ ಒಂದು ಪತ್ರ ಬರೆಯಿರಿ.

<u>ದಿನಾಂಕ : ೦೫-೦೬-೨೦೧೭</u>

ಇವರಿಂದ,
ತರಣ್ ಸಾಗರ್ ಕೆ ಬಿ
೧೦ನೆಯ ತರಗತಿ,
ಶ್ರೀ ಸುಜಾತ ಪ್ರೌಢಶಾಲೆ,
ಹುಣಸಘಟ್ಟ,
ತರೀಕೆರೆ ತಾಲ್ಲೂಕು

ನನ್ನ ಪ್ರೀತಿಯ ಮಾತೃಶ್ರೀ ಅವರಿಗೆ ನಿಮ್ಮ ಮಗ ಮಾಡುವ ನಮಸ್ಕಾರಗಳು. ನಾನು ಇಲ್ಲಿ ಆರೋಗ್ಯವಾಗಿದ್ದು ಉತ್ತಮವಾಗಿ ಓದುತ್ತಿದೇನೆ. ನಿಮ್ಮ ಆರೋಗ್ಯವನ್ನು ಕುರಿತು ಪತ್ರ ಬರೆಯಿರಿ.

ಅಂದ ಹಾಗೆ ಈ ಪತ್ರ ಬರೆದ ಕಾರಣವೇನೆಂದರೆ ನಮ್ಮ ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಗಳು ಕೆಲವೇ ದಿನಗಳಲ್ಲಿ ಆರಂಭವಾಗುತ್ತವೆ. ಈಗಾಗಲೇ ನಡೆದ ಘಟಕ ಪರೀಕ್ಷೆಗಳು, ಕಿರು ಪರೀಕ್ಷೆಗಳು, ಮಧ್ಯವಾರ್ಷಿಕ ಪರೀಕ್ಷೆಗಳು, ಪೂರ್ವಸಿದ್ಧತಾ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆದು ನಮ್ಮ ಶಾಲೆಗೆ ನಾನು ಮೊದಲ ಸ್ಥಾನವನ್ನು ಪಡೆದಿದ್ದೇನೆ. ಮುಂದಿನ ವಾರ್ಷಿಕ ಪರೀಕ್ಷೆಯಲ್ಲೂ ನಾನೇ ಮೊದಲ ಸ್ಥಾನವನ್ನು ಪಡೆಯಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇನೆ. ಹೀಗಾಗಿ ಬೆಳಗ್ಗೆ ೫ ಗಂಟೆಗೆ ಎದ್ದು ಓದುವ ಅಭ್ಯಾಸವನ್ನು ಇಟ್ಟುಕೊಂಡಿದ್ದೇನೆ. ಈ ಹಿನ್ನೆಲೆಯಲ್ಲಿ ನಮ್ಮ ಶಿಕ್ಷಕರು ಎಲ್ಲಾ ರೀತಿಯ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ. ಪರೀಕ್ಷೆ ಮುಗಿದ ನಂತರ ಊರಿಗೆ ಬರುತ್ತೇನೆ. ಮನೆಯಲ್ಲಿ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿ.

ಇಂತಿ ತಮ್ಮ ಪ್ರೀತಿಯ ಮಗ
ತರುಣ್ ಸಾಗರ್ ಕೆ ಬಿ

ಇವರಿಗೆ,
ಗೀತಮ್ಮ / ಬಸವರಾಜ್ ಕೆ ಎಲ್
ಚಿತ್ರಹಳ್ಳಿ
ಹೊಳಲ್ಕೆರೆ,
ಚಿತ್ರದುರ್ಗ ಜಿಲ್ಲೆ.

೨ ನಿಮ್ಮನ್ನು ಮೈಸೂರು ಜಿಲ್ಲೆಯ ಶ್ರೀ ಶಿವಕುಮಾರ ಸ್ವಾಮೀಜಿ ಪ್ರೌಢಶಾಲೆಯ ವಿದ್ಯಾರ್ಥಿ ಸ್ನೇಹಾ ಎಂದು ಭಾವಿಸಿಕೊಂಡು ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ೧೦೦೦ ರೂಪಾಯಿ ಕಳುಹಿಸಿಕೊಡುವಂತೆ ಕೋರಿ ನಿಮ್ಮ ತಂದೆಯವರಿಗೆ ಒಂದು ಪತ್ರವನ್ನು ಬರೆಯಿರಿ.

<u>ದಿನಾಂಕ : ೨೦/೦೮/೨೦೧೮</u>

ಇವರಿಂದ,
ಸ್ನೇಹಾ,
ಶ್ರೀ ಶಿವಕುಮಾರ ಸ್ವಾಮೀಜಿ ಪ್ರೌಢಶಾಲೆ,
ತರಳಬಾಳು ಬಡಾವಣೆ
ಮೈಸೂರು

ತೀರ್ಥರೂಪ  ತಂದೆಯವರಿಗೆ ನಿಮ್ಮ ಮಗಳಾದ ಸ್ನೇಹಾ ಮಾಡುವ ನಮಸ್ಕಾರಗಳು. ನಾನು ಇಲ್ಲಿ  ಆರೋಗ್ಯವಾಗಿದ್ದು ಚೆನ್ನಾಗಿ ಓದುತ್ತಿದ್ದೇನೆ. ನಿಮ್ಮ ಆರೋಗ್ಯವನ್ನು ಕುರಿತು ಒಂದು ಪತ್ರ ಬರೆಯಿರಿ.

ಅಂದ ಹಾಗೆ ಈ ಪತ್ರ ಬರೆದ ಕಾರಣವೇನೆಂದರೆ ನಮ್ಮ ಶಾಲೆಯಿಂದ ದಿನಾಂಕ : ೨೦-೧೨-೨೦೧೮ರಿಂದ ೨೩-೧೨-೨೦೧೮ರವರೆಗೆ ಮೂರು ದಿನಗಳ ಶೈಕ್ಷಣಿಕ ಪ್ರವಾಸವನ್ನು ಹಮ್ಮಿಕೊಂಡಿದ್ದಾರೆ. ಧರ್ಮಸ್ಥಳ, ಹೊರನಾಡು, ಶೃಂಗೇರಿ, ಕೊಲ್ಲೂರು, ಗೋಕರ್ಣ, ಮುರುಡೇಶ್ವರ ಮುಂತಾದ ಸ್ಥಳಗಳಿಗೆ ಹೋಗುತ್ತಿದ್ದೇವೆ. ನಾನು ಸಹ ಈ ಪ್ರವಾಸಕ್ಕೆ ಹೋಗಲು ಇಚ್ಛಿಸಿದ್ದೇನೆ. ಅದ್ದರಿಂದ ಪ್ರವಾಸದ ವೆಚ್ಚ ೧೦೦೦ ರೂಪಾಯಿಗಳನ್ನು ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಮನೆಯಲ್ಲಿ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿ.

ಇಂತಿ ನಿಮ್ಮ ಪ್ರೀತಿಯ ಮಗಳು
ಸ್ನೇಹಾ

ಇವರಿಗೆ,
ಮರುಳಸಿದ್ದಯ್ಯ ಬಿ,
ಬಸವನಾಳ್,
ರಾಂಪುರ ಅಂಚೆ
ದಾವಣಗೆರೆ ತಾಲ್ಲೂಕು.

೩. ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮವನ್ನು ಕುರಿತು ಶಿವಮೊಗ್ಗದಲ್ಲಿರುವ ನಿಮ್ಮ ಗೆಳಯನಿಗೆ ಒಂದು ಪತ್ರವನ್ನು ಬರೆಯಿರಿ.

<u>ದಿನಾಂಕ : ೧೫/೦೮/೨೦೧೭</u>

ಇವರಿಂದ,
ಮೋಹಿತ್ ಟಿ ಎಮ್
೧೦ನೆಯ ತರಗತಿ
ರುದ್ರಾಕ್ಷಿಪುರ ಪ್ರೌಢಶಾಲೆ,
ಚಿಕ್ಕಮಗಳೂರು ಜಿಲ್ಲೆ.

ಪ್ರೀತಿಯ ಗೆಳೆಯನಿಗೆ ನಿನ್ನ ಆತ್ಮೀಯ ಗೆಳೆಯನ ಶುಭ ಕಾಮನೆಗಳು. ನಾನು ಇಲ್ಲಿ ಆರೋಗ್ಯವಾಗಿದ್ದು ಚೆನ್ನಾಗಿ ಓದುತ್ತಿದ್ದೇನೆ. ನಿನ್ನ ಆರೋಗ್ಯವನ್ನು ಕುರಿತು ಒಂದು ಪತ್ರ ಬರೆಯಿರಿ.

ಅಂದ ಹಾಗೆ ಈ ಪತ್ರ ಬರೆದ ಕಾರಣವೇನೆಂದರೆ ನಮ್ಮ ಶಾಲೆಯಲ್ಲಿ ದಿನಾಂಕ : ೧೫-೦೮-೨೦೧೭ರಂದು ನಮ್ಮ ದೇಶದ ದೊಡ್ಡ ಹಬ್ಬವಾದ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ಸಂಭ್ರಮದಿಂದ ಆಚರಿಸಿದೆವು. ಬೆಳಗ್ಗೆ ೬ ಗಂಟೆಗೆ ಸರಿಯಾಗಿ ಊರಿನ ಪ್ರಮುಖ ಬೀದಿಗಳಲ್ಲಿ ಪ್ರಭಾತ್ ಪೇರಿ ಮುಗಿಸಿ ನಂತರ ಧ್ವಜಾರೋಹಣ ಕಾರ್ಯದಲ್ಲಿ ಪಾಲ್ಗೊಂಡೆವು. ನಂತರ ನಡೆದ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಮಹತ್ವವನ್ನು ಕುರಿತು ನಮ್ಮ ಶಿಕ್ಷಕರು ಮಾತನಾಡಿದರು. ಅತಿಥಿಗಳಾಗಿ ಆಗಮಿಸಿದ್ದ ಸ್ವಾತಂತ್ರ್ಯ ಹೋರಾಟಗಾರರಾದ ದೊರೆಸ್ವಾಮಿಯವರು ಮಾತನಾಡಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ವೀರಯೋಧರ ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು. ಕೊನೆಗೆ ನಾವೆಲ್ಲರೂ ದೇಶದ ಬಗ್ಗೆ ಅಭಿಮಾನವನ್ನು ಮೂಡಿಸುವಂಥ ಗೀತೆಗಳಿಗೆ ನೃತ್ಯ ಮಾಡಿದೆವು. ನಿಮ್ಮ ಶಾಲೆಯಲ್ಲಿ ನಡೆದ ಕಾರ್ಯಕ್ರಮವನ್ನು ಕುರಿತು ಪತ್ರ ಬರೆ.

ಮನೆಯಲ್ಲಿ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸು.

ಇಂತಿ ನಿನ್ನ ಪ್ರೀತಿಯ ಸ್ನೇಹಿತ
ಮೋಹಿತ್ ಟಿ ಎಮ್

ಇವರಿಗೆ,
ಮಂಜುನಾಥ್ ಟಿ ಎಸ್,
ಆದರ್ಶ ನಿಲಯ,
ವಿದ್ಯಾ ನಗರ,
ಶಿವಮೊಗ್ಗ.

ಗಿರಿಜಾಶಂಕರ್ ಜಿ ಎಸ್, ಶ್ರೀ ಅಮೃತೇಶ್ವರ ಪ್ರೌಢಶಾಲೆ, ನೇರಲಕೆರೆ. Girijashankar.gs23@gmail.com

೪ ನಿಮ್ಮ ಶಾಲೆಯಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವ ಸಂಭ್ರಮವನ್ನು ಕುರಿತು ದಾವಣಗೆರೆಯಲ್ಲಿರುವ ನಿಮ್ಮ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

<u>ದಿನಾಂಕ : ೨೦/೦೭/೨೦೧೭</u>

ಇವರಿಂದ,

ಗೌತಮಿ<br>
೧೦ನೆಯ ತರಗತಿ<br>
ಅಕ್ಕಮಹಾದೇವಿ ಪ್ರೌಢಶಾಲೆ,<br>
ಚಿಕ್ಕಮಗಳೂರು.

ಪ್ರೀತಿಯ ಗೆಳೆತಿಗೆ ನಿನ್ನ ಆತ್ಮೀಯ ಗೆಳತಿಯ ಶುಭ ಕಾಮನೆಗಳು. ನಾನು ಇಲ್ಲಿ ಆರೋಗ್ಯವಾಗಿದ್ದು ಚೆನ್ನಾಗಿ ಓದುತ್ತಿದ್ದೇನೆ. ನಿನ್ನ ಆರೋಗ್ಯವನ್ನು ಕುರಿತು ಒಂದು ಪತ್ರ ಬರೆಯಿರಿ.

ಅಂದ ಹಾಗೆ ಈ ಪತ್ರ ಬರೆದ ಕಾರಣವೇನೆಂದರೆ ನಮ್ಮ ಶಾಲೆಯಲ್ಲಿ ದಿನಾಂಕ : ೦೧-೧೧-೨೦೧೭ರಂದು ನಮ್ಮ ನಾಡಿನ ದೊಡ್ಡ ಹಬ್ಬವಾದ ಕನ್ನಡ ರಾಜ್ಯೋತ್ಸವ ದಿನವನ್ನು ಅತ್ಯಂತ ಸಂಭ್ರಮದಿಂದ ಆಚರಿಸಿದೆವು. ಬೆಳಗ್ಗೆ ೮ ಗಂಟೆಗೆ ಸರಿಯಾಗಿ ಊರಿನ ಪ್ರಮುಖ ಬೀದಿಗಳಲ್ಲಿ ಕನ್ನಡಾಂಬೆಯ ಭಾವಚಿತ್ರದೊದಿಗೆ ಮೆರವಣಿಗೆ ಮಾಡಿದೆವು. ನಂತರ ನಡೆದ ಕಾರ್ಯಕ್ರಮದಲ್ಲಿ ಕನ್ನಡ ರಾಜ್ಯೋತ್ಸವದ ಮಹತ್ವವನ್ನು ಕುರಿತು ನಮ್ಮ ಕನ್ನಡ ಶಿಕ್ಷಕರು ಮಾತನಾಡಿದರು. ಅತಿಥಿಗಳಾಗಿ ಆಗಮಿಸಿದ್ದ ಕನ್ನಡದ ಪ್ರಸಿದ್ಧ ಸಾಹಿತಿಗಳಾದ ಎಸ್ ಎಲ್ ಭೈರಪ್ಪನವರು ಮಾತನಾಡಿ ಕನ್ನಡ ನಾಡು ನುಡಿಯ ಬಗ್ಗೆ ಎಲ್ಲರೂ ಅಭಿಮಾನವನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು. ಕೊನೆಗೆ ನಾವೆಲ್ಲರೂ ಕನ್ನಡದ ಬಗ್ಗೆ ಅಭಿಮಾನವನ್ನು ಮೂಡಿಸುವಂಥ ಗೀತೆಗಳಿಗೆ ನೃತ್ಯ ಮಾಡಿದೆವು. ನಿಮ್ಮ ಶಾಲೆಯಲ್ಲೂ ನಡೆದ ಕಾರ್ಯಕ್ರಮವನ್ನು ಕುರಿತು ಪತ್ರ ಬರೆ.

ಮನೆಯಲ್ಲಿ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸು.

ಇಂತಿ ನಿನ್ನ ಪ್ರೀತಿಯ ಸ್ನೇಹಿತೆ<br>
ಗೌತಮಿ

ಇವರಿಗೆ,

ವಿಶ್ರುತ ಟಿ<br>
ತುಂಬು ಕುಟುಂಬ ನಿಲಯ,<br>
ತರಳಬಾಳು ನಗರ,<br>
ದಾವಣಗೆರೆ

೫ ನಿಮ್ಮನ್ನು ಚಿತ್ರದುರ್ಗದ ಬಸವೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿ ಕಾರ್ತಿಕ್ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಮಕ್ಕಳ ದಿನಾಚರಣೆಯ ಸಂಭ್ರಮವನ್ನು ಕುರಿತು ಬೆಂಗಳೂರಿನ ಜಯನಗರದಲ್ಲಿರುವ ನಿಮ್ಮ ಗೆಳೆಯನಿಗೆ ಒಂದು ಪತ್ರವನ್ನು ಬರೆಯಿರಿ.

ದಿನಾಂಕ : ೧೪/೧೧/೨೦೧೭

ಇವರಿಂದ,
ಕಾರ್ತಿಕ್
೧೦ನೆಯ ತರಗತಿ
ಬಸವೇಶ್ವರ ಪ್ರೌಢಶಾಲೆ,
ಚಿತ್ರದುರ್ಗ

ಪ್ರೀತಿಯ ಗೆಳಯನಿಗೆ ನಿನ್ನ ಆತ್ಮೀಯ ಗೆಳಯನ ಶುಭ ಕಾಮನೆಗಳು. ನಾನು ಇಲ್ಲಿ ಆರೋಗ್ಯವಾಗಿದ್ದು ಚೆನ್ನಾಗಿ ಓದುತ್ತಿದ್ದೇನೆ. ನಿನ್ನ ಆರೋಗ್ಯವನ್ನು ಕುರಿತು ಒಂದು ಪತ್ರ ಬರೆಯಿರಿ.

ಅಂದ ಹಾಗೆ ಈ ಪತ್ರ ಬರೆದ ಕಾರಣವೇನೆಂದರೆ ನಮ್ಮ ಶಾಲೆಯಲ್ಲಿ ದಿನಾಂಕ : ೧೪-೧೧-೨೦೧೭ರಂದು ಮಕ್ಕಳ ದಿನಾಚರಣೆಯನ್ನು ಅತ್ಯಂತ ಸಂಭ್ರಮದಿಂದ ಆಚರಿಸಿದೆವು. ಜವಾಹರ್‌ಲಾಲ್ ನೆಹರು ಅವರ ಜನ್ಮದಿನವನ್ನು ನಾವು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸುತ್ತೇವೆ.

ನಮ್ಮ ಶಾಲೆಯಲ್ಲಿ ವಿದ್ಯಾರ್ಥಿ ಸಂಘದ ಪ್ರತಿನಿಧಿಗಳಾದ ನಮ್ಮನ್ನು ವೇದಿಕೆಯ ಮೇಲೆ ಕೂರಿಸಿದ್ದರು. ಹಾಡು, ನೃತ್ಯ, ಕಿರು ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿದೆವು. ಮಕ್ಕಳ ಮಹತ್ವವನ್ನು ಸಾರುವುದು ಈ ದಿನದ ಉದ್ದೇಶವಾಗಿತ್ತು. ಇಡೀ ಕಾರ್ಯಕ್ರಮ ನಮ್ಮಲ್ಲಿ ಉತ್ಸಾಹದ ಜೊತೆಗೆ ಜವಾಬ್ದಾರಿಯನ್ನು ನೆನೆಪಿಸಿತು.

ಮನೆಯಲ್ಲಿ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸು.

ಇಂತಿ ನಿನ್ನ ಪ್ರೀತಿಯ ಸ್ನೇಹಿತ
ಕಾರ್ತಿಕ್

ಇವರಿಗೆ,
ಮನು ಆರ್
ನೆಮ್ಮದಿ ನಿಲಯ,
ಜಯ ನಗರ,
ಬೆಂಗಳೂರು.

## ಸತತ ಪ್ರಯತ್ನವೇ ಯಶಸ್ಸಿಗೆ ದಾರಿ

# ಧನ್ಯವಾದಗಳು